ಮಂಡ್ಯ ನಗರದಲ್ಲಿ ಪಾಲಿಟೆಕ್ನಿಕ್ ಪ್ರಾರಂಭ

1908 (2617) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮಂಡ್ಯ ನಗರದಲ್ಲಿ ಪಾಲಿಟೆಕ್ನಿಕ್ ಪ್ರಾರಂಭಿಸಲು ಸರ್ಕಾರ ಆಲೋಚಿಸಿದಿಯೇ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) : -

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿ.ಇಡಿ ಹಾಗೂ ದೈಹಿಕ ಶಿಕ್ಷಕರ ತರಬೇತಿ.

1911 (2210) ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಬಿ.ಇಡಿ ಹಾಗೂ ದೈಹಿಕ ಶಿಕ್ಷಕರ ತರಬೇತಿ ಪಡೆದವರ ಸಂಖ್ಯೆ ಎಷ್ಟು; ಈಗಾಗಲೇ ಅವರಲ್ಲಿ ಎಷ್ಟು ಜನಕ್ಕೆ ಉದ್ಯೋಗವಕಾಶ ಕಲ್ಪಿಸಲಾಗಿದೆ;

ಆ) ಮೇಲ್ಕಂಡವರಿಗೆ ಉದ್ಯೋಗದ ವಯಸ್ಸಿನ ವಯೋಮಿತಿ ದಾಟಿದವರಿಗೆ ಅವರ ಮುಂದಿನ ಭವಿಷ್ಯಕ್ಕಾಗಿ ಮುಂದೆ ಬರುವ ಉದ್ಯೋಗವಕಾಶದಲ್ಲಿ ಮೊದಲನೆ ಆದ್ಯತೆ ಕೊಡುವುದಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಡಾ: ಜಿ.ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ಬಿ.ಇಡಿ - 7615
ಬಿ.ಪಿ.ಇಡಿ - 207

ಆ ಪೈಕಿ ಕಳೆದ ಐದು ವರ್ಷದಲ್ಲಿ 265 ಬಿ.ಇಡಿ ಮತ್ತು 17 ಬಿ.ಪಿ.ಇಡಿ ಪದವೀಧರರಿಗೆ ಪ್ರೌಢ ಶಾಲೆಗಳಲ್ಲಿ ಉದ್ಯೋಗ ಕಲ್ಪಿಸಲಾಗಿದೆ.

ಆ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಉತ್ತರಹಳ್ಳಿಯಲ್ಲಿನ ಕೊಳವೆ ಬಾವಿ ನಿರ್ಮಾಣ

1912 (2317) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಗ್ರಾಮೋಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕಳೆದ 2 ವರ್ಷಗಳಲ್ಲಿ ಎಂ.ಪಿ.ಡಿ.ಯಿಂದ ಉತ್ತರಹಳ್ಳಿ ಕ್ಷೇತ್ರದಲ್ಲಿ ಎಷ್ಟು ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ: ವಿವರ ನೀಡುವುದು;

ಅ) ಇವುಗಳಲ್ಲಿ ರಿಪೇರಿಗೆ ಬಂದ ಕೊಳವೆ ಬಾವಿಗಳೆಷ್ಟು;

ಇ) ಇವುಗಳಲ್ಲಿ ಎಷ್ಟು ಸರಿಪಡಿಸಲಾಗಿದೆ? ವಿವರ ನೀಡುವುದು;

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) 1999-2000ನೇ ಸಾಲಿನಲ್ಲಿ 35 ಕೈಪಂಪುಗಳು ದುರಸ್ತಿಗೆ ಬಂದಿವೆ.

ಇ) ಎಲ್ಲಾ 35 ಕೈಪಂಪುಗಳನ್ನು ಸರಿಪಡಿಸಲಾಗಿದೆ.

ಅನುಬಂಧ - 1

1998-99 ಮತ್ತು 1999-2000ನೇ ಸಾಲಿನಲ್ಲಿ ಉತ್ತರಹಳ್ಳಿ ಕ್ಷೇತ್ರದಲ್ಲಿ ಕೈಪಂಪು ಕೊಳವೆಬಾವಿಗಳನ್ನು ನಿರ್ಮಿಸಲಾದ ಜನವಸತಿಗಳ ವಿವರಗಳು.

1998-99

1. ಹೊಸದೊಡ್ಡಿ, 2.ತಿಪ್ಪಸಂದ್ರ, 3. ಸುಬ್ರಮಣ್ಯಪುರ, 4. ಉತ್ತರಹಳ್ಳಿ ರಿಸರ್ವ್‌ಬ್ಯಾಂಕ್ ಕಾಲೋನಿ, 5. ಅಯ್ಯಪ್ಪನಗರ, 6. ಕೋಣನಕುಂಟೆ ಕ್ರಾಸ್ (ಹರನಗರ), 7. ಗೊಟ್ಟಿಗೆರೆ, 8. ವಸಂತಪುರ, 9. ಗೊಟ್ಟಿಗೆರೆ ವೀವರ್ಸ್ ಕಾಲೋನಿ, 10. ಸುಭಾಷ್‌ನಗರ, 11. ಜಂಬೂಸವಾರಿ ದಿಣ್ಣೆ (ಬಸ್‌ಸ್ಟಾಪ್ ಹತ್ತಿರ), 12. ಉತ್ತರಹಳ್ಳಿ ಶನಿಮಹಾತ್ಮದೇವಸ್ಥಾನದ ಹತ್ತಿರ, 13. ವೈಯ್ಯಪ್ಪನ ಪಾಳ್ಯ (ತಲಘಟ್ಟಪುರ), 14. ದೊಡ್ಡಕಲ್ಲಸಂದ್ರ ಅಯ್ಯಪ್ಪ ಕಾಲೋನಿ, 15. ಚುಂಚಘಟ್ಟ ರಸ್ತೆ, 16. ಕೊತ್ತನೂರು ದಿಣ್ಣೆ ಮತ್ತು 17. ಹೊಸದೊಡ್ಡಿ.

1999-2000

1. ಅವಲಹಳ್ಳಿ, 2. ಅಹ್ಮದ್‌ಮನೆ ಬೀದಿ ಅವಲಹಳ್ಳಿ, 3. ಪಿಳ್ಳದೀನಹಳ್ಳಿ, 4. ರಾಮಲಿಂಗೇಶ್ವರ ದೇವಸ್ಥಾನ, 5. ಕಂಚೀಪುರ, 6. ತಲಘಟ್ಟಪುರ, 7. ಸುವರ್ಣನಗರ, 8. ಸುಭಾಷ್‌ನಗರ, 9. ಹರಿನಗರ (ಕೋಣನಕುಂಟೆ ಬದಲು), 10. ಆದಿಚುಂಚನಗಿರಿ ಮಠ, 11. ಸುಬ್ರಮಣ್ಯಪುರ, 12. ಕೊತ್ತನೂರು ದಿಣ್ಣೆ, 13. ಹೊಸದೊಡ್ಡಿ, 14. ಕೋಣನಕುಂಟೆ ಬ್ಯಾಂಕ್ ಕಾಲೋನಿ, 15. ಬಂಗಾರಪ್ಪ ಲೇಔಟ್, 16. ಗೊಟ್ಟಿಗೆರೆ ಸ್ಕೂಲ್, 17. ಹರಿನಗರ, 18. ಕೃಷ್ಣಪ್ಪ ಬಡಾವಣೆ, 19. ತುರಹಳ್ಳಿ, 20. ವೀರಭದ್ರಸ್ವಾಮಿ ಬಡಾವಣೆ, 21. ಯಾಡಾಳಮ್ಮನಗರ, 22. ತಲಘಟ್ಟಪುರ ಮುನಿರಾಮಯ್ಯ ಕಾಲೋನಿ, 23. ಹರಿನಗರ, 24. ಕೋಣನಕುಂಟೆ ಬ್ಯಾಂಕ್ ಕಾಲೋನಿ ಮತ್ತು 25. ರಾಧಾಕೃಷ್ಣ ಮಂಟಪ.